ತೇಜಸ್ವಿ ನೆನಪಿನ ದೋಣಿಯಲ್ಲಿ- 3

ಪೂರ್ಣಚಂದ್ರ ತೇಜಸ್ವಿಯವರ ಕಥೆಗಳನ್ನು ಎಷ್ಟು ಸಲ ಬೇಕಾದರೂ ಓದಬಹುದು, ಬೋರಾಗೋದಿಲ್ಲ. ಹಾಗೆಯೇ ಅವರ ನೆನಪುಗಳು! ಮೊಗೆದಷ್ಟೂ ಮೇಲಕ್ಕೆ ಬರುತ್ತವೆ. ಮೂಡಿಗೆರೆಯಲ್ಲಿ ಅವರೊಂದಿಗೆ ಒಡನಾಡಿದ ಕೆಲವು ಅಪರೂಪದ ಪ್ರಕರಣಗಳು ಇಲ್ಲಿವೆ..



ದೈತ್ಯಾಕಾರದ ಟ್ಯಾಂಕರ್ ಮುಂದೆ ಅಡ್ಡ ಬಿದ್ದ ಸ್ಕೂಟರ್!

'ಪಂಡಿತ್ ರವಿಶಂಕರ್ ಹೆಸರು ಕೇಳಿದ್ದೀಯಾ? ರಾಜೀವ್ ತಾರಾನಾಥ್ ಗೊತ್ತಾ? ಅವರೇ ನನ್ನ ಸಂಗೀತದ ಗುರುಗಳು' ಎಂದು ತೇಜಸ್ವಿ ಹೇಳಿದಾಗ ನಾನು ಅವಕ್ಕಾಗಿ ಕುಳಿತೆ.

■ ಧನಂಜಯ ಜೀವಾಳ ಬಿ.ಕೆ.

ಚಾರ್ಮಾಡಿಯಿಂದ ವಾಪಸ್ ಬರುವಾಗ, ದಾರಿಯಲ್ಲಿ ಕೆಂಪು ಹೊಳೆಯನ್ನು ವೀಕ್ಷಿಸಿ ಫೋಟೋ ತೆಗೆದೆವು. ಅಲ್ಲಿನ ಜೀವಜಾಲದ ಬಗ್ಗೆ, 'ಜುಗಾರಿ ಕ್ರಾಸ್'ನ ಬಗ್ಗೆ ವಿವರವಾಗಿ ಮಾತನಾಡಿದೆವು.

ಆ ದಿನದ ಇನ್ನೊಂದು ಘಟನೆಯನ್ನು ಹೇಳಲೇಬೇಕು. ಸ್ವಲ್ಪ ಹೆಚ್ಚೂ ಕಡಿಮೆಯಾಗಿದ್ದರೆ ಅವತ್ತು ತೇಜಸ್ವಿಯವರು ಆ ದಿನದ ಪೇಪರ್‌ನಲ್ಲಿ ದುರಂತ ಸುದ್ದಿಯೊಂದರ ವಸ್ತು ವಿಷಯವಾಗಬೇಕಿತ್ತು!

ವಿಷಯ ಏನಂದ್ರೆ, ಆಗಷ್ಟೇ ಬೆಂಗಳೂರು– ಮಂಗಳೂರು ಹೈವೇ ದುರಸ್ತಿಯಾಗಿತ್ತು. ರಸ್ತೆಯ ಬೃಹತ್ ತಿರುವುಗಳಿಗೆ ಕಲ್ಲನ್ನು ಮೊಳೆ ಹೊಡೆದಂತೆ ಹೊಡೆದಿದ್ದರು– ರೋಡ್‌ಗ್ರಿಪ್ಪಿಗೆ ಅಂತ ಕಾಣಿಸುತ್ತೆ! ಖಾಲಿ ದೈತ್ಯಾಕಾರದ ಟ್ಯಾಂಕರ್‌ಗಳು ತಿರುವಿನಲ್ಲಿ ಯಮದೂತನಂತೆ ವೇಗವಾಗಿ ಇಳಿಯುತ್ತಿದ್ದವು. ರೈಲ್ವೆ ವ್ಯಾಗನ್‌ಗಳಂತೆ ನಿರಂತರವಾಗಿ ಒಂದರ ಹಿಂದೆ ಒಂದು ಎದೆ ನಡುಗಿಸುವಂತೆ ಭೋರ್ಗರೆಯುತ್ತಾ ಮುನ್ನುಗ್ಗುತ್ತಿದ್ದವು.

ಸ್ಕೂಟರನ್ನು ನಾನೇ ಓಡಿಸುತ್ತಿದ್ದೆ. ಒಂದು ತಿರುವಿನಲ್ಲಿ ಸ್ಕೂಟರ್.. 'ಓ ಹೋ ಹೋ ಹೋ' ಎನ್ನುವಷ್ಟರಲ್ಲಿ ರಸ್ತೆ ನಡುವೆ ಹಠಾತ್ತಾಗಿ ಅಡ್ಡ ಮಲಗಿಬಿಡ್ತು! ಎಂಬತ್ತು ಪ್ಲಸ್ ತೂಕದ ಆಸಾಮಿಗಳಿಬ್ಬರ ತೂಕ ತಾಳದೆ ಟೈರ್ ಠುಸ್ ಆಯ್ತೋ ಏನೋ! ಎದುರಿನ ಟ್ಯಾಂಕರ್‌ಗಳು ಕ್ರೀ... ಕ್ರೀ... ಎಂದು ಕ್ಷಣ ಮಾತ್ರದಲ್ಲಿ ರೈಲುಗಾಡಿ ನಿಂತಂತೆ ನಿಂತುಬಿಟ್ಟವು!

'ತೆಗೆದು ಬಿಡ್ತಿದ್ಯಲ್ಲಾ ಮಾರಾಯ ನೀನು! ನಿನಗೇನಾದ್ರೂ ಆಯ್ತಾ?' ಎಂದರು.

ನಮ್ಮಿಬ್ಬರಲ್ಲಿ ಯಾರೂ ಬಿದ್ದಿರಲಿಲ್ಲ. ಸ್ಕೂಟರ್ ಮಾತ್ರ ಬಿದ್ದಿತ್ತು. ಕಾಲು ಕೊಟ್ಟು ನಾವು ಮಕಾಡೆಯಾಗದಂತೆ ಸಪೋರ್ಟ್ ಮಾಡಿಕೊಂಡಿದ್ದೆವು. ಬುಲೆಟ್ ಟ್ಯಾಂಕರ್ ಒಂದು ನಮ್ಮಿಂದ ಐದು ಅಡಿ ದೂರದಲ್ಲಿ ಆತಂಕದಿಂದ ನಿಟ್ಟುಸಿರು ಬಿಡುತ್ತಾ ಬ್ರೇಕನ್ನು ತಳದವರೆಗೂ ಒತ್ತಿಸಿಕೊಂಡು ರಸ್ತೆ ಉಜ್ಜಿಕೊಂಡು ನಿಂತಿತ್ತು.

ಆದದ್ದಿಷ್ಟೆ. ರಸ್ತೆ ತಿರುವಿನಲ್ಲಿ ಯಾವುದೋ ವಾಹನದಿಂದ ಇಂಜಿನ್ ಆಯಿಲ್ ಸುರಿದು ರಸ್ತೆಯೆಲ್ಲಾ ಗೋಕುಲಾಷ್ಟಮಿಯ ಅಡಿಕೆ ಕಂಬವಾಗಿತ್ತು. ಮುಂದಿನ ಟೈರ್ ಹೇಗೋ ದಾಟಿದ್ದರೂ ಹಿಂದಿನ ಚಕ್ರ ತೂಕ ಹೆಚ್ಚಿದ್ದರಿಂದ ಒಂದು ಬದಿಗೆ ಸರಕ್ ಅಂತ ಜಾರಿ ನಮಗೆ ಪರಲೋಕದ ಪಾಸ್‌ಪೋರ್ಟ್ ಕೊಡಿಸುವುದರಲ್ಲಿತ್ತು.

ಏನೂ ನಡೆದೇ ಇಲ್ಲವೆಂಬಂತೆ ಸ್ಕೂಟರ್ ಎಬ್ಬಿಸಿ ಮಾತೂ ಆಡದೆ ಸೀದಾ ಮುಂದಕ್ಕೆ ಹೊರಟೆವು. ಟ್ಯಾಂಕರ್ ಡ್ರೈವರ್‌ಗಳು ನಮ್ಮನ್ನು ಓರೆಗಣ್ಣಿನಿಂದ 'ಇದ್ಯಾವ ಸೀಮೆಯವೋ' ಎಂಬಂತೆ ನೋಡುತ್ತಿದ್ದರು!

***

ನಾನು ಮೂಡಿಗೆರೆಯಲ್ಲಿ ಮನೆ ಮಾಡಿ ವಾಸವಿದ್ದ ಸಂದರ್ಭ. ಎಂ.ಜಿ. ರಸ್ತೆ ಬದಿಯಲ್ಲಿ ಸ್ಕೂಟರ್ ಮೇಲೆ ಕುಳಿತ್ಕೊಂಡು ಪೇಟೆ ಬೀದಿಯನ್ನು ಅವಲೋಕಿಸುತ್ತಿದ್ದರು ತೇಜಸ್ವಿ. ನನ್ನ ಜೊತೆ ಗೆಳೆಯ ಹೆಬ್ಬಾರ್ ಸಹ ಇದ್ದರು. 'ಏನ್ ಇಲ್ಲಿ ನಿಂತಿದ್ದೀರಿ?' ಎಂದೆ. ತಪಸ್ಸಿಗೆ ಭಂಗ ಬಂದವರಂತೆ ತಿರುಗಿ ನೋಡಿದವರ ಮುಖದಲ್ಲಿ ತಥ್ ಎಂಬ ಬೇಜಾರಿತ್ತು. ನನಗೂ 'ಈಗ ಮಾತಾಡಿಸ್ಬಾರ್ದಿತ್ತು' ಅನ್ನಿಸಿತ್ತು. ಮಾತನಾಡಿಸಿಯಾಗಿತ್ತು. ಅವರಿಗೆ ಖಂಡಿತವಾಗಿಯೂ ಕಿರಿಕಿರಿಯಾಗಿತ್ತು.

ಇನ್ನೇನು ಮಾತು ಮುಂದುವರಿಸಬೇಕಿತ್ತಲ್ಲ. 'ನನ್ನ ಮನೆ ಇಲ್ಲೇ ಇದೆ ಬನ್ನಿ' ಎಂದೆ.

'ಇಲ್ಲ ಕಣಯ್ಯ, ಬೇಕಾದಷ್ಟು ಕೆಲ್ಸ ಇದೆ. ಇನ್ಯಾವತ್ತಾದ್ರೂ ನೋಡ್ತೀನಿ' ಅಂದ್ರು.

ಮತ್ತೊಮ್ಮೆ 'ಬನ್ನಿ ಬಿಡುವಾಗಿದ್ದೀರಲ್ಲ' ಎಂದೆ.

'ನಿನ್ ಮನೆಯೇನು ಟೂರಿಸ್ಟ್ ಸ್ಪಾಟಾ.. ಹೆ.. ಹ್ಹೆ..' ಎಂದವರೇ ಸ್ಕೂಟರ್ ಸ್ಟಾರ್ಟರ್ ಒದ್ದು ಸೀದಾ ಕೆಳ ಗೋಡಿಸಿದರು. ಅವರ ಮಾತಿಗೆ ಸರಿಯಾಗಿ ಹೆಬ್ಬಾರ್ ಬೇರೆ 'ಟೂರಿಸ್ಟ್‌ಗಳಿಗೆ ಎಂಟ್ರಿ ಟಿಕೆಟ್‌ಗೆ ಏನು ಚಾರ್ಜ್ ಮಾಡ್ತೀರಿ?' ಎಂದು ಗಾಯಕ್ಕೆ ಉಪ್ಪು ಸವರಿದರು.

ಮರುದಿನ ಬೆಳಿಗ್ಗೆ ಏಳು ಗಂಟೆಗೆ ಬಾಗಿಲು ದಡದಡ ಬಡಿ ದಂತಾಯ್ತು. ಭಾನುವಾರವಾದ್ದರಿಂದ ನಿಧಾನಕ್ಕೆ ಎದ್ದರಾಯ್ತೆಂದು ಹಾಸಿಗೆಯಲ್ಲಿ ಮಲಗಿಕೊಂಡೇ ಹೆಂಚೆಣಿಸುತ್ತಿದ್ದೆ. ಎದ್ದು ಬಾಗಿಲು ತೆಗೆದು ನೋಡಿದರೆ ತೇಜಸ್ವಿ! ಆಶ್ಚರ್ಯ, ಗಡಿಬಿಡಿಯಾಯ್ತು. 'ಬನ್ನಿ ಬನ್ನಿ, ನಾನಿನ್ನೂ ಎದ್ದಿರಲಿಲ್ಲ.' ಎಂದೆ.

'ಸೋಮಾರಿ, ಟೈಮೆಸ್ಟಾಗಿದೆ ನೋಡು. ನಿಮ್ಮಂತ ಹುಡುಗರೆಲ್ಲಾ ಇಷ್ಟೊತ್ತು ಮಲಗಿಕೊಂಡಿದ್ರೆ! ಸರಿ ಆಯ್ತು.. ನಡಿ ಭಾನುವಾರ ಅಲ್ವಾ, ನಿನಗೇನಾದ್ರೂ ತಲೆ ಹೋಗೋ ಕೆಲ್ಸ ಇದ್ಯಾ' ಅಂದರು.

ಮನೆಯವರೆಗೂ ಬಂದು ಕರೆದರೆ ಬರೋಲ್ಲ ಅನ್ನೋದು ಅವಿವೇಕದ ಪರಮಾವಧಿ ಎಂದೆನಿಸಿ 'ಮುಖವಾದ್ರೂ ತೊಳೆದು ಕೊಂಡು ಬರಲಾ' ಎಂದೆ. 'ಎಂತಾದಾದ್ರೂ ಮಾಡು ಮಾರಾಯ. ಬೇಗ ಹೊರಡು' ಎಂದು ಖಾಲಿಯಿದ್ದ ಖುರ್ಚಿಯಲ್ಲಿ ಕುಳಿತರು.

ರಪರಪ ಸ್ನಾನ ಮಾಡಿದವನೇ 'ಏನು ವಿಚಾರ, ಯಾವ್ಕಡೆ ಹೋಗ್ಬೇಕು' ಎಂದೆ. 'ಹುರುಡಿ ಹತ್ರ ಯಾವುದೋ ವಿಶೇಷ ಹಕ್ಕಿ ಮರದ ಪೊಟರೆಯೊಳಗೆ ಮೊಟ್ಟೆ ಇಟ್ಟು ಕಾವು ಕೊಡ್ತಿದೆಯಂತೆ. ಆ ತರದ ಹಕ್ಕೀನ ಅವರು ಈ ಹಿಂದೆ ನೋಡಿಲ್ಲಂತೆ. ಹೋಗಿ ಬರೋಣ ಬಾ. ರಘೂನೂ ಬರ್ತೀನಿ ಅಂತ ಹೇಳಿದಾರೆ. ಹಾಗೆ ಹೋಗ್ತಾ ಕರ್ಕೊಂಡೋಗಾನ' ಎಂದರು.

(57ನೇ ಪುಟ ನೋಡಿ)

'ಬರೆಯೋದೆಲ್ಲ ಅಲ್ಲಿರಲಿ, ಸಂಗೀತವನ್ನೇ ಸೀರಿಯಸ್ಸಾಗಿ ಪ್ರಾಕ್ಟೀಸ್ ಮಾಡು' ಎಂದಿದ್ದರಂತೆ ರಾಜೀವ್ ತಾರಾನಾಥ್. ಬಹುಶಃ ಅದನ್ನೇ ಮಾಡಿದ್ದರೆ ಅಲ್ಲೂ ದಾಖಲೆಗಳ ಮೇಲೆ ದಾಖಲೆಗಳನ್ನು ಕುಟ್ಟಿ ಕೆಡವಿ ಬಿಡುತ್ತಿದ್ದರೇನೋ ನಮ್ಮ ತೇಜಸ್ವಿ...



ವಿನ್ಯಾಸ: ದಿಲ್

www.tejaswimanoj.com

ನೆನಪು

ಅಡ್ಡ ಬಿದ್ದ ಸ್ಕೂಟರ್!

(41ನೇ ಪುಟದಿಂದ)

ಹಳ್ಳಿ ಭಾಗದ ನಿಜ ನಿಸರ್ಗ ಪ್ರೇಮಿಗಳು ನೀಡುವ ವರ್ತಮಾನವನ್ನು, ಮಾಹಿತಿಯನ್ನು ಖಚಿತವಾದ ಪುರಾವೆ ಎಂದೇ ಸ್ಪಷ್ಟವಾಗಿ ಗುರುತಿಸುವ ಪ್ರಾಮಾಣಿಕತೆ ಹಾಗೂ ಅಚಲ ವಿಶ್ವಾಸ ಮುಂಚಿನಿಂದಲೂ ರೂಢಿಸಿಕೊಂಡಿದ್ದ ತೇಜಸ್ವಿಯವರಿಗೆ ಯಾವುದೂ ಗೌಣವಲ್ಲ. ಯಾರೂ ಅಮುಖ್ಯವಾಗಿರಲಿಲ್ಲ. ಅರಿಸ್ಟಾಟಲ್‌ಗೆ ನೀಡುವ ಮಾನ್ಯತೆಯನ್ನು ಚೀಂಕ್ರ ಮೇಸ್ತ್ರಿಗೂ ಅವರು ನೀಡುತ್ತಿದ್ದರು. ಅವರ ಕಥೆಗಳಲ್ಲಿ ಯಂಕ್ಟ, ಕರಿಯಪ್ಪ, ಚೀಂಕ್ರ, ಮಂದಣ್ಣ, ಕಾಳಪ್ಪ– ಮುಂತಾದ ಅತಿ ಸಾಮಾನ್ಯ ಪಾತ್ರಗಳು ಕೂಡ ದಂಗು ಬಡಿಸುವ ಸೋಜಿಗದ ಸಂಗತಿಗಳನ್ನು ಮುಖ್ಯವಲ್ಲವೇನೋ ಎಂಬಂತೆ ಆಡು ಮಾತಿನಲ್ಲಿ ಹೇಳಿಬಿಡುತ್ತವೆ.

ಅದೊಂದು ಗುರುವಾರ ಬ್ಯಾಂಕಿಗೆ ಬಂದವರೇ 'ಏ ಧನಂಜಯ ಹೊರಗೆ ಯಾರದ್ದೋ ಹೊಸ ಸ್ಕೂಟರ್ ಇದ್ದಂಗಿದೆಯಲ್ಲಾ... ಯಾರದ್ದು ಗೊತ್ತಾ?' ಎಂದರು. ನನಗೆ ಗೊತ್ತಾಯ್ತು. ಅದು ನನ್ನ ಸ್ಕೂಟರ್ ಬಗ್ಗೆನೇ ಪ್ರಶ್ನೆ ಎಂದು.

'ನನ್ನದೇ.'

'ಯಾವಾಗ ತಗೊಂಡೋ? ಕೀ ಕೊಡಿಲ್ಲಿ'

–ಎಂದವರೇ ಬಿಳಗುಳದವರೆಗೆ ಟ್ರಯಲ್ ಹೋಗಿ ಬಂದರು.

'ಬೊಂಬಾಟಾಗಿದೆ ಮಾರಾಯ? ಎಲ್ಲಿ ತಗೊಂಡೆ, ದುಡ್ಡೆಷ್ಟು' ಎಂದೆಲ್ಲ ಕೇಳಿಕೊಂಡರು.

ಶನಿವಾರ ಬೆಳಗ್ಗೆ ಬ್ಯಾಂಕಿನ ಬಳಿ ಬಂದವರೇ 'ಹೊರಗೆ ಬಂದು ನೋಡು! ನಾನೊಂದು ಹೊಸ ಸ್ಕೂಟರ್ ತಂದಿದ್ದೀನಿ' ಎಂದರು. ಹೊರಗೆ ಹೋಗಿ ನೋಡಿದರೆ ನನ್ನ ಸ್ಕೂಟರ್ ಬಣ್ಣದ್ದೇ. ಅದೇ ಮಾಡಲ್, ಕಡೆಗೆ ಅದೇ ಬ್ಯಾಚ್‌ನ ಸ್ಕೂಟರನ್ನು ತಂದು ನಿಲ್ಲಿಸಿದ್ದರು!

ಆಗ ಅವರ 40 ವರ್ಷದ ನಿರಂತರ ಗೆಳೆಯನಾಗಿದ್ದ ಹಳೆ ಸ್ಕೂಟರ್‌ನ ದುರಸ್ತಿ ನಡೆಯುತ್ತಿತ್ತು. ಮನೆಯ ಬಳಿಯೇ ಬಿಚ್ಚಿ ಹಾಕಿ ಮೆಕಾನಿಕ್ ಕೇಶವನ ಕೈಯಲ್ಲಿ ಮೇಜರ್ ಸರ್ಜರಿ ಮಾಡಿಸಲಾಗುತ್ತಿತ್ತು. ಸುಮಾರು ಒಂದು ತಿಂಗಳ ಕಾಲ ನಡೆದ ರಿಪೇರಿಯಿಂದ ಅವರ ದೈನಂದಿನ ಓಡಾಟಕ್ಕೆ ತೊಂದರೆಯಾಗಬಾರದೆಂದು ತಾತ್ಕಾಲಿಕ ವ್ಯವಸ್ಥೆಯಾಗಿ ಹೊಸ ಸ್ಕೂಟರನ್ನೇ ತಂದಿದ್ದರು. ಆದರೆ ಹಳೆ ಸ್ಕೂಟರಿನ ರಿಪೇರಿ ಮುಗಿದ ಕೂಡಲೇ ಹೊಸ ಸ್ಕೂಟರನ್ನು ಮೆಡಿಕಲ್ ಶಾಪ್‌ನ ನಟರಾಜ್‌ಗೆ ಮಾರಿದರು! 'ಮೈಲ್ಸ್ ಟು ಗೋ ಬಿಫೋರ್ ಐ ಸ್ಲೀಪ್' ಎಂದುಕೊಂಡು ಕೊನೆಯವರೆಗೂ ದುರಸ್ತಿಗೊಂಡ ತಮ್ಮ ಹಳೆಯ ಸ್ಕೂಟರಿನಲ್ಲೇ ತೇಜಸ್ವಿ ಓಡಾಡುತ್ತಿದ್ದರು.

ಒಂದೊಮ್ಮೆ ಮೂಡಿಗೆರೆಯ ಸಂತೆಯಲ್ಲಿ 'ಲೈಫ್ ಕಾನ್ಸೆಪ್ಟ್ ಫೋಟೋ ತೆಗೆಯೋಣ' ಎಂದು ಹೋದೆವು. ಸಂತೆಯಲ್ಲಿದ್ದವರಿಗೆಲ್ಲ ಒಂದು ತರಹ ಥ್ರಿಲ್. ಮೀನು ಮಾರುವವರಿಂದ ಹಿಡಿದು, ಮಡಕೆ ಮಾಡುವ ಹೆಂಗಸಿನವರೆಗೆ ಎಲ್ಲರೂ ವಿವಿಧ ಬಗೆಯಲ್ಲಿ ಪೋಸು ಕೊಡುತ್ತಾ ನಮ್ಮ ಉದ್ದೇಶವನ್ನೇ ಹಾಳು ಮಾಡಿದರು.

ಅಲ್ಲಿ ಕೆಲ್ಸ ಹತ್ತೋಲ್ಲ ಎಂದು ಬಸ್‌ಸ್ಟ್ಯಾಂಡಿಗೆ ಬಂದ್ರೆ, ದಾವಣಗೆರೆಗೆ ವಾಪಸ್ ಹೊರಟಿದ್ದ ಹದಿನಾರು ಕೆಲ್ಸದವರು ತಮ್ಮ ತಮ್ಮಲ್ಲೇ ಹೊಡೆದಾಟ ಶುರು ಮಾಡಿಕೊಳ್ಳಬೇಕೇ? ಯಾಕೋ ಇವತ್ತು ನಮ್ಮ ಗ್ರಹಚಾರ ಸರಿಯಿಲ್ಲವೆಂದು ಸೀದಾ ಚಿಕನ್ ತೆಗೆದುಕೊಂಡು ಮನೆಗೆ ವಾಪಸ್ ಬಂದೆವು. 'ಇದನ್ನು ಪಲ್ಯ ಮಾಡು' ಎಂದು ತಮ್ಮ ಶ್ರೀಮತಿಯವರಿಗೆ ನೀಡಿದರು. 'ಬಾ ಇಲ್ಲಿ, ನಿನಗೊಂದು ವಿಶೇಷ ತೋರಿಸ್ತೀನಿ'



ಎಂದವರೇ 'ಸಿತಾರ್ ನೋಡಿದ್ದೀಯಾ' ಎಂದರು. (ನಿಜ ಹೇಳ್ತೀನಿ– ನನಗೆ ಈ ಕ್ಷಣದವರೆಗೂ ಸಿತಾರ್‌ಗೂ ವೀಣೆಗೂ ಸರಿಯಾದ ವ್ಯತ್ಯಾಸ ಕೂಡಾ ಗೊತ್ತಿಲ್ಲ.)

ಒಳಮನೆಯ ಡೈನಿಂಗ್ ಹಾಲಿನಲ್ಲಿ ದಿವಾನ್ ಮೇಲೆ ಚಕ್ಕಳಂಬಕ್ಕಳ ಹಾಕಿಕೊಂಡು ತೇಜಸ್ವಿ ತನ್ಮಯತೆಯಿಂದ ಸಿತಾರ್ ನುಡಿಸಲಾರಂಭಿಸಿದರು. ಎಲ್ಲಿತ್ತೋ ಸ್ಫೂರ್ತಿ.. ಯಾವುದೋ ಅಗೋಚರ ಪ್ರೇರಣೆಯಿಂದ ಸಿತಾರ್‌ಅನ್ನು ನುಡಿಸಿದ್ದು ಈ ಕ್ಷಣದಲ್ಲೂ ನನ್ನ ಕಿವಿಯಲ್ಲಿ ಅನುರಣಿಸುತ್ತಿದೆ. 'ಸಿತಾರ್ ಎಂಬ ವಾದ್ಯವನ್ನು ಇಷ್ಟು ಚೆನ್ನಾಗಿ ಮನೋಜ್ಞವಾಗಿ ನುಡಿಸಲು ಸಾಧ್ಯವಿದೆ' ಎಂದು ನನಗಾಗಲೇ ಗೊತ್ತಾದದ್ದು. ಕೋಳಿ ಪಲ್ಯ ಮಾಡಲು ಒಳ ಹೋಗಿದ್ದ ರಾಜೇಶ್ವರಿಯವರೂ ಸಹ ಹೊರಬಂದು ಬಾಗಿಲಿಗೆ ಒರಗಿಕೊಂಡು ಸಂಗೀತವನ್ನು ಆಸ್ವಾದಿಸುತ್ತಿದ್ದುದು ಸಿತಾರ್ ವಾದನವನ್ನು ನಿಲ್ಲಿಸಿದ ಮೇಲೆಯೇ ನಮ್ಮ ಗಮನಕ್ಕೆ ಬಂತು.

'ಬಹಳ ಚೆನ್ನಾಗಿ ಬಾರಿಸ್ತೀರಿ' ಎಂದೆ. 'ಬಾರಿಸೋದಲ್ಲ ಮಾರಾಯ, ನುಡಿಸೋದು ಗೊತ್ತಾಯ್ತ?' ಎಂದರು.

'ಸರಿ, ಯಾವಾಗ? ಎಲ್ಲಿ? ಯಾರ ಬಳಿ ಕಲಿತಿರಿ?'

'ಪಂಡಿತ್ ರವಿಶಂಕರ್ ಹೆಸರು ಕೇಳಿದ್ದೀಯಾ? ರಾಜೀವ್ ತಾರಾನಾಥ್ ಗೊತ್ತಾ? ಅವರೇ ನನ್ನ ಸಂಗೀತದ ಗುರುಗಳು' ಎಂದಾಗ ಅವಕ್ಕಾಗಿ ಕುಳಿತೆ.

'ಬರೆಯೋದೆಲ್ಲ ಅಲ್ಲಿರಲಿ, ಸಂಗೀತವನ್ನೇ ಸೀರಿಯಸ್ಸಾಗಿ ಪ್ರಾಕ್ಟೀಸ್ ಮಾಡು' ಎಂದಿದ್ದರಂತೆ ರಾಜೀವ್ ತಾರಾನಾಥ್. ಬಹುಶಃ ಅದನ್ನೇ ಮಾಡಿದ್ದರೆ ಅಲ್ಲೂ ದಾಖಲೆಗಳ ಮೇಲೆ ದಾಖಲೆಗಳನ್ನು ಕುಟ್ಟಿ ಕೆಡವಿ ಬಿಡುತ್ತಿದ್ದರೇನೋ ನಮ್ಮ ತೇಜಸ್ವಿ.

ಯಾರೋ ಬೇಜವಾಬ್ದಾರಿ ಜನ ತಮ್ಮ ತೋಟದೊಳಗೆ ಎಸೆದುಹೋಗಿದ್ದ ಕಸ ಕೆದಕಿ, ವಿಳಾಸ ಪತ್ತೆ ಮಾಡಿ ಅವರಿಂದಲೇ ತೆಗೆಸಿದ್ದರು ತೇಜಸ್ವಿ! ತೀರಾ ಇತ್ತೀಚೆಗೆ ಮೂಡಿಗೆರೆ ಪಂಚಾಯ್ತಿಯವರು ಅವರ ಮನೆ ಹಿಂಭಾಗದ ಈಚಲ ಹರವನ್ನು ಕಸದ ತಿಪ್ಪೆ ಮಾಡಲು ಮುಂದಾದಾಗ ತೀವ್ರವಾಗಿ ನೊಂದಿದ್ದರು.

'ಮುನ್ಸಿಪಾಲಿಟಿಯವರು ಅವರ ಮನೆ ಕಸಾನ ಅವರದ್ದೇ ಜಾಗದಲ್ಲಿ ಹಾಕ್ಕಳ್ಳಕ್ಕೆ ಹೇಳ್ರಯ್ಯ. ಊರನ್ನೆಲ್ಲಾ ಹಾಳ್ಮಾಡೋದು ಬೇಡ' ಎಂದಿದ್ದರು.

(ಮುಂದಿನ ವಾರ: 'ನಾನು ನಿಮ್ಮಾಗೇ ಮನುಷ್ಯ ಕಣ್ರಯ್ಯಾ')

www.tejaswivismaya.com